ದಿನಾಂಕ: 01-08-2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಶ್ರೀ.ಯು.ಟಿ.ಪಿ. ವಕೀಲರಿಂದ,**

ನಾನು ಈ ದಿನ ನ್ಯಾಯಾಲಯಕ್ಕೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಅಂಶಗಳನ್ನು ನಾನೇ ಸ್ವತ: ಹೇಳಿ ಬರೆಯಿಸಿದ್ದು ಮತ್ತು ಅವು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಇರುತ್ತವೆ.

1. ದಿಃ23.02.2023 ರಂದು ಬರೆದ ಪ್ರಾಮಿಸರಿ ನೋಟನ್ನು ಹಾಜರುಪಡಿಸಿದ್ದು ಅದನ್ನು ನಿಪಿ1 ಎಂದು ಗುರುತಿಸಲಾಯಿತು. ನಿಪಿ1 ಕ್ಕೆ ಹೆಚ್.ತಿಪ್ಪೆಸ್ವಾಮಿ ಎನ್ನುವವರು ಸಹಿ ಮಾಡಿ ಹೆಬ್ಬಟ್ಟು ಗುರುತು ಹಾಕಿರುತ್ತಾರೆ. ಅದಕ್ಕೆ ಸಾಕ್ಷಿದಾರರಾಗಿ ಮಧು, ಲಕ್ಷ್ಮೀದೇವಿ ಮತ್ತು ರಾಮಾಂಜನಿ ಎನ್ನುವವರು ಸಹಿ ಮಾಡಿರುತ್ತಾರೆ. ಅದಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ. ಸಾಕ್ಷಿಯು ಹೆಚ್.ತಿಪ್ಪೆಸ್ವಾಮಿ ಮತ್ತು ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ1(ಎ) ಮತ್ತು ನಿಪಿ-1(ಬಿ) ಎಂದು ಗುರುತಿಸಲಾಯಿತು.
2. ದಿಃ05.02.2026 ರಂದು ವಕೀಲರ ಮುಖಾಂತರ ಕಳುಹಿಸಿರುವ ನೋಟಿಸ್‌ನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 2 ಎಂದು ಗುರುತಿಸಲಾಯಿತು.
3. ಎರಡು ಅಂಚೆ ರಸೀದಿಗಳನ್ನು ಮತ್ತು ಎರಡು ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ 3 ರಿಂದ 6 ಎಂದು ಗುರುತಿಸಲಾಯಿತು.

ಈ ಎಲ್ಲಾ ಮೇಲೆ ಹೇಳಿದ ಕಾರಣಗಳಿಂದ ನನ್ನ ದಾವೆಯನ್ನು ಪುರಸ್ಕರಿಸಿ ಡಿಕ್ರಿ ಮಾಡಬೇಕೆಂದು ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

**ಪಾಟೀ ಸವಾಲು : ಪ್ರತಿವಾದಿ ಪರ ಏಕ ತರ್ಫಿ ಇರುತ್ತಾರೆ.**

**ಮರು ವಿಚಾರಣೆ : ಏನೂ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಸಂಡೂರು.